RNU AIR DHARWAD

DECEMBER 26, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಇಂದು ಹೊಸ ದಿಲ್ಲಿ, ವಿಜ್ಞಾನ ಭವನದಲ್ಲಿ ಆಯೋಜಿತ ಭವ್ಯ ಸಮಾರಂಭದಲ್ಲಿ, ಒಲಿಂಪಿಯನ್ ಈಜುಗಾರ್ತಿ, 15 ವರ್ಷ ವಯಸ್ಸಿನ, ಬೆಂಗಳೂರಿನ ಧಿನಿಧಿ ದೇಸಿಂಗು, ಬಿಹಾರದ ಯುವ ಕ್ರಿಕೆಟಿಗ, 14 ವರ್ಷ ವಯಸ್ಸಿನ ವೈಭವ ಸೂರ್ಯವಂಶಿ ಸೇರಿದಂತೆ, 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ, 20 ಸಾಹಸಿ ಮಕ್ಕಳಿಗೆ ರಾಷ್ಟ್ರೀಯ ಬಾಲ ಪುರಸ್ಕಾರಗಳನ್ನು ನೀಡಿ, ಗೌರವಿಸಿದರು. ತಮ್ಮ ಭಾಷಣದಲ್ಲಿ ಪ್ರಶಸ್ತಿ ವಿಜೇತ ಮಕ್ಕಳು ಹಾಗೂ ಅವರ ಪೋಷಕರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿನಂದಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ, ಅವರು ಈ ಮಧ್ಯಾಹ್ನ 12.30 ಕ್ಕೆ ರಾಷ್ಟ್ರೀಯ ಬಾಲ ಪುರಸ್ಕಾರ ವಿಜೇತ ಮಕ್ಕಳು ಹಾಗೂ ಪೋಷಕರೊಂದಿಗೆ ಸಂವಾದ ನಡೆಸಲಿದ್ದಾರೆ.

<><><>

ವಿಕಸಿತ ಭಾರತ 2047; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ‌ ‌’ನ್, ವಿ.ಬಿ; ಜಿ ರಾಮ ಜಿ ಎಂದು, ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು, ಕೇಂದ್ರ ಮರು ನಾಮಕರಣ ಮಾಡಿದೆ. ಗ್ರಾಮೀಣ ಕೂಲಿ ಕಾರ್ಮಿಕರ ಹಾಜರಾತಿಯ, ಬಯೋಮೆಟ್ರಿಕ್ ದೃಢೀಕರಣ, ಮೊಬೈಲ್ ಆಧಾರಿತ ಮೇಲ್ವಿಚಾರಣೆ. ಸಶಕ್ತ ಸಾಮಾಜಿಕ ಲೆಕ್ಕ ಪರಿಶೋಧನಾ ಕಾರ್ಯ ವಿಧಾನದೊಂದಿಗೆ, ನೂತನ ಕಾಯ್ದೆ, ವಿಕಸಿತ ಭಾರತ ‘ಜಿ ರಾಮ ಜಿ’ಯನ್ನು, ಕೇಂದ್ರ ಅನುಷ್ಟಾನಗೊಳಿಸಿದೆ. ಕೊಪ್ಪಳ ಜಿಲ್ಲೆ ಮಾಳೆಕೊಪ್ಪ ಗ್ರಾಮದ, ಕೂಲಿ ಕಾರ್ಮಿಕ ಹಾಗೂ ಫಲಾನುಭವಿ, ಸಿದ್ದಪ್ಪ ಮಾಳೆಕೊಪ್ಪ, ಪ್ರದೇಶ ಸಮಾಚಾರಕ್ಕಾಗಿ ಜಿ–ರಾಮ್–ಜಿ ಯೋಜನೆ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸಿದ್ದಪ್ಪ ಮಾಳೆಕೊಪ್ಪ ಧ್ವನಿ 25 ಸೆಕೆಂದುಗಳು

<><><>

‘ಪ್ರಭುವಿನೆಡೆಗೆ ಪ್ರಭುತ್ವ’ ಎಂಬ, ವಿನೂತನ ಕಾರ್ಯಕ್ರಮವನ್ನು, ಗದಗ ಜಿಲ್ಲೆಯಲ್ಲಿ ಜಾರಿಗೆ ತರಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಗದಗ, ಮುಳಗುಂದ ನಾಕಾದಲ್ಲಿ, ರಸ್ತೆ ಬದಿಯ, ತುರ್ತು ಸಹಾಯತಾ ಕೇಂದ್ರ, 6ನೇ ಎಸ್.ಓ.ಎಸ್. ಲೋಕಾರ್ಪಣೆಗೊಳಿಸಿ, ಅವರು ಮಾತನಾಡಿದರು. ತ್ವರಿತಗತಿಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಯೋಜನೆ ಅಡಿ, ತಂತ್ರಜ್ಞಾನದ ಸಹಾಯದೊಂದಿಗೆ, ‘ಬಟನ್’ ಒತ್ತುವ ಮೂಲಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ, ಕಮಾಂಡ್ ಸೆಂಟರ್‌ಗೆ ಮಾಹಿತಿ ರವಾನೆಯಾಗಿ, ತಕ್ಷಣ ಸ್ಪಂದಿಸಲಾಗುತ್ತದೆ ಎಂದು ಸಚಿವ ಎಚ್.ಕೆ. ಪಾಟೀಲ, ಹೇಳಿದರು.

<><><>

ರಾಜ್ಯದ ಪ್ರತಿಯೊಂದು ರೈಲು ನಿಲ್ದಾಣಗಳಲ್ಲಿ ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ರಾಮನಗರದಲ್ಲಿ ಹೆಚ್ಚಿನ ರೈಲುಗಳ ನಿಲುಗಡೆಯ ನಿಟ್ಟಿನಲ್ಲಿ, ಅಗತ್ಯ ಕ್ರಮ ವಹಿಸಲಾಗುವುದು ಎಂದು ರೇಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವರಾದ ವಿ.ಸೋಮಣ್ಣ ಹೇಳಿದ್ದಾರೆ. ಬಿಡದಿ ಹಾಗೂ ರಾಮನಗರ ರೈಲು ನಿಲ್ದಾಣಗಳಿಗೆ ಭೇಟಿ ನೀಡಿ, ಅಮೃತ್ ಭಾರತ್ ನಿಲ್ದಾಣ ಕಾಮಗಾರಿಗಳನ್ನು ಪರಿಶೀಲಿಸಿ ಅವರು ಮಾತನಾಡಿದರು. ಬೆಂಗಳೂರು ಸಮೀಪವಿರುವ ಬಿಡದಿಯಲ್ಲಿ ರಾಜ್ಯ ಸರ್ಕಾರವು ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ, ಕೈಗಾರಿಕಾಭಿವೃದ್ಧಿಗೆ ಸಹಾಯಕವಾಗಲಿದೆ ಎಂದರು.

<><><>

ಕೋಲಾರದಲ್ಲಿ ಮಾತನಾಡಿದ ಸಂಸದ ಎಂ. ಮಲ್ಲೇಶ ಬಾಬು, ಜಿಲ್ಲೆಯ ಕೆ.ಜಿ.ಎಫ್ ನಗರದಲ್ಲಿ, ರೇಲ್ವೆ ಕೋಚ್ ಸರ್ವಿಸಿಂಗ್ ಘಟಕ ಸ್ಥಾಪಿಸಲು ಬಿ.ಜಿ.ಎಂ.ಎಲ್ ಗೆ ಸೇರಿದ 500 ಎಕರೆ ಸ್ಥಳವನ್ನು ಬಳಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರದಲ್ಲೇ ಅನುಮೋದನೆ ಸಿಗುವ ವಿಶ್ವಾಸವಿದೆ ಎಂದರು.

<><><>

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯ, ಕೃಷಿ ಮಹಾವಿದ್ಯಾಲಯಗಳ, 16ನೇ ಅಂತರ್ ಕಾಲೇಜು ಯುವಜನೋತ್ಸವ, "ಕಲಾ ಸಂಗಮ", ಇಂದಿನಿಂದ ಮೂರು ದಿನಗಳ ಕಾಲ, ಕಲಬುರಗಿಯ ಕೃಷಿ ಮಹಾವಿದ್ಯಾಲಯದ, ಪ್ರೇಕ್ಷಾ ಗೃಹದಲ್ಲಿ ಆಯೋಜಿತವಾಗಿದೆ.

<><><>

ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ, ಬಿ.ಪಿ.ಎಲ್. ಹಾಗೂ ಅಂತ್ಯೋದಯ ಪಡಿತರ ಫಲಾನುಭವಿಗಳಿಗೆ, ಪ್ರತಿ ತಿಂಗಳು, ಐದು ಕಿಲೋ ಅಕ್ಕಿಯನ್ನು, 2029ರ ವರೆಗೆ ಕೇಂದ್ರ ಸರ್ಕಾರ ನೀಡಲಿದೆ. 'ಹಸಿವು ಮುಕ್ತ ಭಾರತ ನಿರ್ಮಾಣ'ದ ಧ್ಯೇಯದೊಂದಿಗೆ, ಅಪೌಷ್ಟಿಕತೆ, ರಕ್ತ ಹೀನತೆಯಂತಹ ಕಾಯಿಲೆಗಳನ್ನು ದೂರ ಮಾಡಲು, ಸಂಕಲ್ಪಿಸಿ, ಯೋಜನೆಯನ್ನು ವಿಸ್ತರಿಸಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ, ಚಾಮರಾಜನಗರ ಜಿಲ್ಲೆಯ, ಉಪ ನಿರ್ದೇಶಕಿ, ವಸುಂಧರಾ ಹೆಗ್ಡೆ ಮಾಹಿತಿ ನೀಡಿ, ಜಿಲ್ಲೆಯಲ್ಲಿ 484 ನ್ಯಾಯಬೆಲೆ ಅಂಗಡಿಗಳಿದ್ದು, 2 ಲಕ್ಷದ 87 ಪಡಿತರ ಚೀಟಿಗಳಿವೆ. 8 ಲಕ್ಷ 83 ಸಾವಿರದ 9 ನೂರಾ 79 ಫಲಾನುಭವಿಗಳಿದ್ದಾರೆ ಎಂದರು.

<><><>

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನ ಫಾದರ್ ಮುಲ್ಲರ್ ಚಾರಿಟೇಬಲ್ ಸಂಸ್ಥೆ ಮುಂಭಾಗದಲ್ಲಿ, ಇಂದು ಭಾರತ ವಿಶಿಷ್ಟ ಗುರುತು ಪ್ರಾಧಿಕಾರದ ಕಚೇರಿ ಉದ್ಘಾಟನೆ ನೆರವೇರಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>